**B**

**CCE RR**
**UN-REVISED**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2018

**S.S.L.C. EXAMINATION, JUNE, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 26. 06. 2018 ] ಸಂಕೇತ ಸಂಖ್ಯೆ : **33-K**

Date : 26. 06. 2018 ] CODE NO. : **33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

(ಹೊಸ ಪಠ್ಯಕ್ರಮ / New Syllabus)

(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)

[ ಗರಿಷ್ಠ ಅಂಕಗಳು : 80

[ Max. Marks : 80

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ :** | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 8 × 1 = 8 |
| 1. | ರಾಹುಲರ ಹೆಸರಿಗೆ ದ್ರಾವಿಡ್ ಎಂಬುದು ಸೇರಿದ್ದು ಹೇಗೆ ? | |
| | *ಉತ್ತರ :* | |
| | ದಕ್ಷಿಣ ಭಾರತದಿಂದ ಬಂದವರನ್ನು ದ್ರಾವಿಡರು ಎನ್ನುತ್ತಿದ್ದರು, ರಾಹುಲರ ಮುತ್ತಜ್ಜ ದಕ್ಷಿಣ ಭಾರತದಿಂದ ಬಂದವರಾದ್ದರಿಂದ ರಾಹುಲರಿಗೆ ದ್ರಾವಿಡ್ ಎಂಬುದು ಸೇರಿತು. | |
| 2. | ಜಿಂಕೆಯು ಬೇಡನ ಬಾಣದ ಹೊಡೆತದಿಂದ ಹೇಗೆ ತಪ್ಪಿಸಿಕೊಂಡಿತು ? | |
| | *ಉತ್ತರ :* | |
| | ಜಿಂಕೆಯು ಬೇಡನ ಬಾಣದ ಹೊಡೆತದಿಂದ ಹಾರಿ ತಪ್ಪಿಸಿಕೊಂಡಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಪುಟ್ಟರಾಜ ಗವಾಯಿಯವರು ಎಲ್ಲಿ ಜನಿಸಿದರು ?<br>***ಉತ್ತರ :***<br>ಪುಟ್ಟರಾಜ ಗವಾಯಿಯವರು ಹಾವೇರಿ ಜಿಲ್ಲೆಯ ದೇವಗಿರಿಯಲ್ಲಿ ಜನಿಸಿದರು. | |
| 4. | ಸಂಜೆ ಮನೆಗೆ ಮರಳುವ ಗೋಪಾಲನ ಭಯಕ್ಕೆ ಕಾರಣವೇನು ?<br>***ಉತ್ತರ :***<br>ಸಂಜೆ ಮನೆಗೆ ಮರಳುವ ಗೋಪಾಲನು ಒಬ್ಬನೇ ಬರುವುದರಿಂದ ಭಯವಾಗುತ್ತಿತ್ತು. | |
| 5. | ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?<br>***ಉತ್ತರ :***<br>ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ. | |
| 6. | ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ?<br>***ಉತ್ತರ :***<br>ಕೌರವನ ಸೇನೆಯು ಉತ್ತರನಿಗೆ ಕಡಲಿನಂತೆ ಕಾಣಿಸಿತು. | |
| 7. | ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿತ್ತು ?<br>***ಉತ್ತರ :***<br>ಬಣ್ಣ ಬಣ್ಣದ ಹೂಗಳು ಕಾಮನ ಬಿಲ್ಲಿನಂತೆ ಕಾಣಿಸುತ್ತಿದ್ದವು. | |
| 8. | ಉತ್ತರನು ನಿಟ್ಟೋಟದಲ್ಲಿ ಏಕೆ ಓಡಿದನು ?<br>***ಉತ್ತರ :***<br>ಉತ್ತರನು ಸಾಗರದಂತ ಕೌರವನ ಸೇನೆಯನ್ನು ಕಂಡು ಹೆದರಿ ಯುದ್ಧ ಮಾಡದೇ ನಿಟ್ಟೋಟದಲ್ಲಿ ಓಡಿದನು. | |
| | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) | 11 × 2 = 22 |
| 9. | ಗಿಳಿಯು ಇಂದ್ರನಿಗೆ ಯಾವ ವರ ಕೊಡಬೇಕೆಂದು ಕೇಳಿತು ?<br>***ಉತ್ತರ :***<br>"ದೇವರಾಜ ವರವನ್ನು ಕೊಡುವ ಇಚ್ಛೆ ಇದ್ದರೆ ಈ ಮರಕ್ಕೆ ಮೊದಲಿನಂತೆ ಹಸಿರಿನಿಂದ ಕಳಕಳಿಸುವ, ಫಲ ಪುಷ್ಪಭಾರದಿಂದ ಬೀಗುವ, ನೆರಳು ಕೊಡುವ ವರವನ್ನು ದಯಪಾಲಿಸು! ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ" ಎಂದು ಗಿಳಿಯು ಕೇಳಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 10. | ಕರ್ನಾಟಕದ ಕ್ರಿಕೆಟ್ ಆಟಗಾರರ ಹಿರಿಮೆ ಎಂತಹುದು ?<br>*ಉತ್ತರ :*<br>ಬಿ.ಎಸ್. ಚಂದ್ರಶೇಖರ ಎಂದಾಕ್ಷಣ ಅವರ ಎಸೆತದ ವೇಗ ಮತ್ತು ಗೂಗ್ಲಿಯ ನೆನಪಾಗುತ್ತದೆ. ಲೇಟ್‌ಕಟ್, ಸ್ಕ್ವೇರ್‌ಕಟ್‌ಗೆ ಜಿ.ಆರ್. ವಿಶ್ವನಾಥರು ಹೆಸರು ಪಡೆದವರು. ಒಂದು ಇನ್ನಿಂಗ್ಸ್‌ನ ಎಲ್ಲಾ ಹತ್ತು ಹುದ್ದರಿಗಳನ್ನು ಪಡೆದ ವಿಶ್ವದ ದ್ವಿತೀಯ ಎಸೆತಗಾರರು ಅನಿಲ್ ಕುಂಬ್ಳೆಯವರು. ಕಲಾತ್ಮಕ ಆಟಗಾರ ದ್ರಾವಿಡ್ ಇವರು ಕ್ರಿಕೆಟ್‌ನಲ್ಲಿ ಕರ್ನಾಟಕಕ್ಕೆ ಹಿರಿಮೆ ತಂದಿದ್ದಾರೆ. | |
| 11. | ಪಶ್ಚಿಮ ಘಟ್ಟಗಳ ಉತ್ಪನ್ನಗಳು ನಮ್ಮ ದಿನನಿತ್ಯದ ಬದುಕಿಗೆ ಹೇಗೆ ಸಹಕಾರಿಯಾಗಿವೆ ?<br>*ಉತ್ತರ :*<br>ಪಶ್ಚಿಮ ಘಟ್ಟಗಳಿಂದ ಹರಿದು ಬಂದ ನದಿಯೇ ನೀವಿದ್ದಲ್ಲಿ ಬೆಳಕು ಹರಿಸುತ್ತದೆ. ಹೊರಗೆ ಸುರಿಯುವ ಜಡಿ ಮಳೆ, ತೇವ ತುಂಬಿದ ಗಾಳಿಗೆ ಈ ಘಟ್ಟಗಳೇ ಕಾರಣ. ನಾವು ಕುಡಿಯುವ ಕಾಫಿ, ಬಳಸುವ ಲೋಟ, ಲವಂಗ ಏಲಕ್ಕಿ ಮಿಶ್ರಿತ ಅಡಕೆಪುಡಿ, ಬೆತ್ತದ ಕುರ್ಚಿ, ಹೀಗೆ ಪಶ್ಚಿಮ ಘಟ್ಟದ ಉತ್ಪನ್ನಗಳು ನಮ್ಮ ದಿನನಿತ್ಯದ ಬದುಕಿಗೆ ಸಹಕಾರಿಯಾಗಿದೆ. | |
| 12. | ಗೋಪಾಲನ ತಾಯಿಯು ತನ್ನ ಮಗ ಬೇಗನೆ ಏಳಬೇಕೆಂದು ಏಕೆ ಬಯಸಿದಳು ?<br>*ಉತ್ತರ :*<br>ಮಗನು ಬೇಗನೆ ಎದ್ದು ಸ್ನಾನ ಮಾಡಿ ಶುಚಿಯಾದ ಬಟ್ಟೆ ಧರಿಸಿ ಪೂಜೆಗೆ ಹೂಗಳನ್ನು ಕೊಯ್ದು ತರಬೇಕು. ಶಾಲೆಗೆ ಸರಿಯಾದ ಸಮಯಕ್ಕೆ ಹೋಗದಿದ್ದರೆ, ಗುರುಗಳು ಬೈಯ್ಯುತ್ತಾರೆ. ಆದ್ದರಿಂದ ಮಗನು ಬೇಗನೇ ಏಳಬೇಕೆಂದು ತಾಯಿ ಬಯಸುತ್ತಾಳೆ. | |
| 13. | ಒಡಲು ಒಡೆಯುವಂತೆ ಅರ್ಜುನನು ಮನದಲ್ಲಿ ನಗಲು ಕಾರಣವೇನು ?<br>*ಉತ್ತರ :*<br>ಅರಮನೆಯಲ್ಲಿ ಹೆಂಗಸರ ಎದುರಿಗೆ ಜಂಭಕೊಚ್ಚಿಕೊಳ್ಳುತ್ತಿದ್ದ ಉತ್ತರಕುಮಾರನು ಯುದ್ಧ ಭೂಮಿಯಲ್ಲಿ ಕೌರವನ ಸೈನ್ಯವನ್ನು ನೋಡುತ್ತಿದ್ದಂತೆ ಹೆದರಿ ಓಡೋಡಿ ಹೋಗುತ್ತಿದ್ದನು. ಇದನ್ನು ಕಂಡ ಅರ್ಜುನನು ಒಡಲು ಒಡೆಯುವಂತೆ ನಕ್ಕನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 14. | ಯಾವಾಗ ಜೋಯಿಸರ ಮಾತು ವೇದವಾಕ್ಯವಾಗುತ್ತಿತ್ತು ?<br>*ಉತ್ತರ :*<br>ಎರಡೋ ಮೂರೋ ತಲೆಮಾರುಗಳಷ್ಟು ಹಳೆಯ ಕುರ್ಚಿಯಲ್ಲಿ ಕುಳಿತು ಜೋಯಿಸರು ಒಂದು ಮಾತು ಹೇಳಿದರೆ ಕುಂದಾಪುರದಿಂದ ಶೃಂಗೇರಿಯವರೆಗಿನ ಆಸ್ತಿಕರಿಗೆಲ್ಲ ಆ ಒಂದು ಮಾತು ವೇದವಾಕ್ಯವಾಗುತ್ತಿತ್ತು. | |
| 15. | ಅಪ್ಪಯ್ಯನಿಗೆ ಮಕ್ಕಳು ಹೇಗೆ ಹೆಸರು ತರುತ್ತಾರೆ ?<br>*ಉತ್ತರ :*<br>ಅಪ್ಪಯ್ಯನಿಗೆ ಹೆಣ್ಣು ಮಕ್ಕಳು ಹುಟ್ಟಿದರೆ ಬೇರೆಯವರ ಮನೆಯ ಸೊಸೆಯಾಗಿ ಒಳ್ಳೆಯ ರೀತಿಯಲ್ಲಿ ಬಾಳಿ ತವರಿಗೆ ಹೆಸರು ತರುತ್ತಾಳೆ. ಗಂಡು ಮಗು ಹುಟ್ಟಿದರೆ ಮನೆತಕ್ಕೆ ಹೆಸರು ತರುವಂತೆ ಉತ್ತಮ ಕೆಲಸ ಮಾಡಿ ಅಪ್ಪಯ್ಯನಿಗೆ ಮಕ್ಕಳು ಹೆಸರು ತರುತ್ತಾರೆ. | |
| 16. | ಕವಿ ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಹೇಗೆ ಮಾಡಬೇಕೆನ್ನುತ್ತಾರೆ ?<br>*ಉತ್ತರ :*<br>ತಟ್ಟೆಯಲ್ಲಿನ ಕರ್ಪೂರವು ಮೌನವಾಗಿ ಕರಗುವ ರೀತಿ, ದೀಪದ ಎದುರಿಗೆ ಕತ್ತಲೆಯು ಸರಿಯುವಂತೆ ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಸದ್ದುಗದ್ದಲವಿಲ್ಲದೆ ಶಾಂತಿಯಿಂದ ಮಾಡಬೇಕೆಂದು ಕವಿ ಸಿ.ಪಿ.ಕೆ.ಯವರು ತಿಳಿಸುತ್ತಾರೆ. | |
| 17. | ಸಾವಿತ್ರಿ ತೀರಾ ಮುಗ್ಧೆ ಹೇಗೆ ?<br>*ಉತ್ತರ :*<br>ಸಾವಿತ್ರಿಗೆ ತನ್ನ ತಾಯಿಯ ಮನೆಯಲ್ಲಿ ಎಂದೂ ಅಡುಗೆ ಮಾಡಿ ಅಭ್ಯಾಸವಿಲ್ಲ. ಹೊಸ ಮಧುಮಗಳು ಸಾವಿತ್ರಿಗೆ ಗಂಡನ ಮನೆಯಲ್ಲಿ ಅಡುಗೆ ಮಾಡಬೇಕಾಗಿ ಬಂದಾಗ ತೊಗರಿ–ಕಡಲೆ ಬೇಳೆಗೆ ವ್ಯತ್ಯಾಸ ಗೊತ್ತಿರದಷ್ಟು ಮುಗ್ದೆಯಾಗಿದ್ದಳು. | |
| 18. | ಪ್ರಕೃತಿಯು ಮಾನವನಿಗೆ ತನ್ನ ಪ್ರತಿಭಟನೆಯನ್ನು ಹೇಗೆ ತೋರಿದೆ ?<br>*ಉತ್ತರ :*<br>ಪೆಟ್ಟು ತಿಂದ ಪ್ರಕೃತಿ ಮೊದಮೊದಲು ಮೆಲ್ಲಗೆ ಪ್ರತಿಭಟಿಸಿತು. ಯಾರೂ ಪ್ರತಿಭಟನೆಯನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಲಕ್ಷ್ಯಕ್ಕೆ ತಾರದೆ ಅರಣ್ಯಗಳ ಸೂರೆಯನ್ನು ಮುಂದುವರೆಸಿದಾಗ ಪ್ರಕೋಪ ಹೆಚ್ಚಾಯಿತು. ಘಾಸಿಗೊಂಡ ಪಶ್ಚಿಮ ಘಟ್ಟಗಳ ಕೋಪತಾಪದ ಪ್ರಭಾವದಿಂದ ಹವಾಮಾನದ ಏರುಪೇರುಗಳು ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತಗಳು ಉಂಟಾಗತೊಡಗಿದವು. | |
| 19. | ಬಸವಣ್ಣನವರು ಕುರುಡು ಸಂಪ್ರದಾಯವನ್ನು ಹೇಗೆ ಲೇವಡಿ ಮಾಡಿದ್ದಾರೆ ?<br>***ಉತ್ತರ :***<br>ಇಂದಿನ ಸಮಾಜದಲ್ಲಿ ತಮ್ಮ ಪಾಪ ಕಾರ್ಯಗಳನ್ನು ಕಳೆದುಕೊಳ್ಳಲು ನೀರಕಂಡಲ್ಲಿ ಮುಳುಗುವರು. ಮರವನ್ನು ಕಂಡರೆ ಪುಣ್ಯಕ್ಕಾಗಿ ಸುತ್ತುವರು. ಬತ್ತುವ ಜಲ, ಒಣಗುವ ಮರವನ್ನು ಮೆಚ್ಚಿದವರು ಭಗವಂತನನ್ನು ಏನು ಅರಿಯುವರು ಎಂದು ಬಸವಣ್ಣನವರು ಕುರುಡು ಸಂಪ್ರದಾಯಗಳನ್ನು ಲೇವಡಿ ಮಾಡಿದ್ದಾರೆ. | |
| 20. | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ಮೂರು ಅಂಕಗಳು)<br>ಕೊರಡ ಕೊನರಿಸಿ ..........................................................<br>......................................................................................<br>......................................................................................<br>.............................................. ಕಲರವಕೆ ಮತ್ತೇರಿದೆ.<br>**ಅಥವಾ**<br>ಯುಗದ ಹಿಂದಿನ ..........................................................<br>......................................................................................<br>......................................................................................<br>.............................................. ತುಂಬ ಸವಿಚೈತ್ರವು.<br>***ಉತ್ತರ :***<br>ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು<br>ಬರಡು ಜೀವಕೆ ಹೊಸತು ಚೈತನ್ಯವು<br>ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ<br>ಚಿಲಿಪಿಲಿಯ ಕಲರವಕೆ ಮತ್ತೇರಿದೆ.<br>**ಅಥವಾ** | $1 \times 3 = 3$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ<br>ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ<br>ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ<br>ಎಲ್ಲರೆದೆಗಳ ತುಂಬ ಸವಿಚೈತ್ರವು. | |
| | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 21. | ಬಿ.ಪಿ. ರಾಧಾಕೃಷ್ಣ | |
| | ***ಉತ್ತರ :*** | |
| | ಬೆಂಗಳೂರು ಪುಟ್ಟಯ್ಯ ರಾಧಾಕೃಷ್ಣ ಎಂದೇ ಪ್ರಸಿದ್ಧರಾದ ಇವರು ಕ್ರಿ.ಶ. ೧೯೧೮ ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ೧೯೫೪ ರಲ್ಲಿ ಡಾಕ್ಟರೇಟ್ ಪಡೆದರು. ಇವರ ಕೃತಿಗಳು : ಸಿ.ವಿ. ರಾಮನ್, ಚಾರ್ಲ್ಸ್ ಡಾರ್ವಿನ್, ಐನ್‌ಸ್ಟೀನ್ ರಾಮಾನುಜಂ, ಮೇರಿಕ್ಯೂರಿ ಮುಂತಾದವು. ಎರಡು ಬಾರಿ ಸಾಹಿತ್ಯ ಅಕಾಡೆಮಿ, ೧೯೯೧ ರಲ್ಲಿ ಪದ್ಮಶ್ರೀ, ರಾಜ್ಯೋತ್ಸವ ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ. | |
| 22. | ಸು.ರಂ. ಎಕ್ಕುಂಡಿ | |
| | ***ಉತ್ತರ :*** | |
| | ಸುಬ್ಬಣ್ಣ ರಂಗನಾಥ ಎಕ್ಕುಂಡಿ ಇವರು ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಲ್ಲಿ ೧೯೨೩ ರಲ್ಲಿ ಜನಿಸಿದರು. ಇವರ ಕೃತಿಗಳು : ಆನಂದ ತೀರ್ಥ, ಸಂತಾನ, ಹಾವಾಡಿಗರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹುಡುಗ, ಮತ್ಸಗಂಧಿ, ಬೆಳ್ಳಕ್ಕಿಗಳು, ಬಕುಳದ ಹೂವುಗಳು ಮುಂತಾದವು ಶ್ರೀಯುತರಿಗೆ ನೆಹರು ಪ್ರಶಸ್ತಿ, ರಾಜ್ಯ ಶಿಕ್ಷಕ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ. | |
| | **ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯ ಬರೆಯುವುದು :** | 2 × 3 = 6 |
| | ಕೃತಿ, ಕರ್ತೃ, ಪಠ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 23. | "ಪುಟ್ಟರಾಜ, ಇನ್ನೊಮ್ಮೆ ಕನ್ನಡನಾಡಲ್ಲಿ ಹುಟ್ಟಿ ಬಾ"<br>***ಉತ್ತರ :***<br>ಈ ಮೇಲಿನ ವಾಕ್ಯವನ್ನು 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಸಂಪಾದಿತ ಗದ್ಯದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಅವರ ಶಿಷ್ಯರು ಹಾಗೂ ಭಕ್ತವೃಂದ ಹೇಳುತ್ತಾರೆ.<br>ಡಾ॥ ಪಂಡಿತ ಪುಟ್ಟರಾಜ ಗವಾಯಿಯವರು ೧೭. ೯. ೨೦೧೦ ರಂದು ಅನಂತದಲ್ಲಿ ಲೀನರಾದರು. ಈ ಸುದ್ದಿ ಹರಡುತ್ತಿದ್ದಂತೆ ವೀರೇಶ್ವರ ಪುಣ್ಯಾಶ್ರಮದಲ್ಲಿ ಮಹಾಮೌನ ಕವಿಯಿತು. ಜೀವನವು ಮರಳಿ ಚಲನಗೊಂಡಾಗ ಹೊರಟ ಉದ್ಗಾರ ಒಂದೇ 'ಪುಟ್ಟರಾಜ, ಇನ್ನೊಮ್ಮೆ ಕನ್ನಡನಾಡಲ್ಲಿ ಹುಟ್ಟಿ ಬಾ'. | |
| 24. | "ಇದ್ದೀ, ನೀನು ಇದ್ದೀ, ನೀನು ಇರಬೇಕು"<br>***ಉತ್ತರ :***<br>ಈ ಮೇಲಿನ ವಾಕ್ಯವನ್ನು ಸುಕನ್ಯ ಮಾರುತಿಯವರು ಬರೆದ 'ಅರಿವು' ಎಂಬ ಕವನದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಯಿತ್ರಿಯ ಅಂತರಾತ್ಮ ಹೇಳುತ್ತದೆ.<br>ದಿನವೆಲ್ಲ ದುಡಿದು ಹಣ್ಣಾದ ಮೈಯನ್ನು ಹಾಸಿಗೆಯಲ್ಲಿ ಚೆಲ್ಲಿ ತುಂಬಾ ಹೊದ್ದು ಮಲಗುತ್ತಾಳೆ. ಇದ್ದಕ್ಕಿದ್ದಂತೆ ಏನೋ ಕಳೆದುಕೊಂಡಂತೆನಿಸಿ ಮೈಯೆಲ್ಲಾ ಮುಟ್ಟಿ ಮುಟ್ಟಿ ನೋಡಿಕೊಂಡಾಗ ತನ್ನ ಇರುವಿಕೆಯ ಅರಿವೆ ಆಗದೆ ಗಾಬರಿಯಾಗುತ್ತದೆ. ಹಾಗಾದರೆ ನಾನಿಲ್ಲವೇ ? ಎಂದುಕೊಂಡಾಗ "ಇದ್ದೀ, ನೀನು ಇದ್ದೀ, ನೀನು ಇರಬೇಕು, ಇರಲೇಬೇಕು." ಎಂದು ಅಂತರಾತ್ಮ ಚೀರಿ ಹೇಳುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದಬಳಕೆ | 1 ಅಂಕ |
| | ಒಟ್ಟು | 4 ಅಂಕಗಳು |

25. ಅಜ್ಜನು ಸಾಹೇಬರ ಮನೆಗೆ ಹೋಗಬೇಕಾಗಿ ಬಂದ ಘಟನೆಯನ್ನು ವಿವರಿಸಿ.

***ಅಥವಾ***

ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ಗೌರವವು ನೊಬೆಲಿಗೆ ಸಮಾನ ಎನಿಸಿದ್ದು ಹೇಗೆ ? ವಿವರಿಸಿ.

***ಉತ್ತರ :***

ಅಜ್ಜ ತಮ್ಮ ಸಂಬಂಧಿಕರೊಬ್ಬರಿಗೆ ಹೆರಿಗೆಯಾದುದರಿಂದ ಐದು ಕೆ.ಜಿ. ಅಕ್ಕಿಯನ್ನು ಹಾಸಿಗೆಯಲಿ ಸುತ್ತಿ ಧಾರವಾಡದಿಂದ ಬಿಜಾಪುರಕ್ಕೆ ರೈಲಿನಲ್ಲಿ ಬಂದು ನಿಲ್ದಾಣದಲ್ಲಿ ಇಳಿದರು. ತನ್ನ ಎಡ ಹೆಗಲ ಮೇಲೆ ಹಾಸಿಗೆಯ ಸುರಳಿ ಹೊತ್ತು ಲೇಖಕರನ್ನು ಬಲಗೈಯಿಂದ ಎಳೆಯುತ್ತಾ ಹೊರನಡೆದರು. ಯಾರಕೈಗೂ ಸಿಗದೆ ಬೇಗನೆ ನಿಲ್ದಾಣದಿಂದ ಹೊರಬರುವುದು ಅವರ ಇಚ್ಛೆಯಾಗಿತ್ತು. ಇನ್ನೇನು ನಿಲ್ದಾಣದಿಂದ ಹೊರಬರಬೇಕು ಅಷ್ಟರಲ್ಲಿ ಪೊಲೀಸ್ ಅಜ್ಜನ ಹೇಗಲ ಮೇಲೆ ಕೈ ಇಟ್ಟ! ಅಜ್ಜ ಬೇವರಿ ಬಿಟ್ಟರು “ನಡೀರಿ ನಿಮ್ಮನ್ನು ಸಾಹೇಬ್ರು ಕರೀತಿದ್ದಾರೆ” ಎಂದು ಗುಡುಗಿದ ಪೊಲೀಸ್ ತಾನು ತಂದಿದ್ದ ಅಕ್ಕಿ ಪೊಲೀಸ್‌ರಿಗೆ ಗೊತ್ತಾಗಿದೆ ಎಂದುಕೊಂಡು ಪೊಲೀಸ್‌ನನ್ನು ಹಿಂಬಾಲಿಸಿದ ಆತ ನಿಲ್ದಾಣದ ಹೊರಗೆ ಕರೆದುಕೊಂಡು ಬಂದು ಅಲ್ಲಿ ನಿಂತಿದ್ದ ಒಂದು ಪೊಲೀಸ್ ಜೀಪನ್ನು ತೋರಿಸಿ ಒರಟಾಗಿ ಹೇಳಿದ “ಅದರಲ್ಲಿ ಹೋಗ್ರಿ ಸಾಹೇಬ್ರನ್ನ ಭೇಟಿ ಆಗ್ರಿ” ಅಂದ ಅಜ್ಜ ಕುಸಿದು ಹೋದರು. ಅಜ್ಜ ತನ್ನನ್ನೇ ಶಪಿಸುತ್ತಾ ಜೀಪು ಹತ್ತಿದ. ಅದು ಜಿಲ್ಲಾ ಪೊಲೀಸ್ ಅಧಿಕಾರಿಯ ದೊಡ್ಡ ಬಂಗಲೆಯ ಮುಂದೆ ಬಂದು ನಿಂತಿತು.

***ಅಥವಾ***

ಪೊಲೀಸ್ ಅಧಿಕಾರಿ ಅಜ್ಜನ ಕಾಲಿಗೆ ನಮಸ್ಕರಿಸಿದಾಗ ಅಜ್ಜ ‘ನೀವ್ಯಾರು ಸಾಹೇಬ್ರ?” ಎಂದ ಅದಕ್ಕೆ ಅಧಿಕಾರಿ “ನಾನ್ರೀ ಸರ್, ಭೀಮ ಮುರಗೋಡ ಭೀಮ್ಯಾ ಮುಳವಾಡದಾಗ ನಿಮ್ಮ ಮನ್ಯಾಗಿದ್ದು ಕಲಿತಿದ್ದೆನೆಲ್ಲಾ ಸರ್” ಎಂದ. ಶಿಷ್ಯ ಎಂಬ ಸಲಿಗೆಯಿಂದ ಅಜ್ಜ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | "ಎಲಾ... ಮಗನ ಭೀಮ್ಯಾ ಪೊಲೀಸ್ ಆಗ್ಯೆನೊ ? ಎಂದು ಕಪಾಳಕ್ಕೆ ಹೊಡದ್ರು ಅದಕ್ಕೆ ಅಧಿಕಾರಿ 'ಹೊಡೀರಿ ಸರ್ ಈ ದೇಹ ನಿಮ್ಮ ಹೊಡೆತ ಪ್ರೀತಿ ತಿಂದೇ ಮನಶ್ಯಾ ಆದದ್ದು ನಿಮಗೆ ನೆನಪ ಅದ ಏನು ಸರ್ ? ನನ್ನಪ್ಪ ಕಸಾ ಗುಡಿಸುತ್ತಿದ್ದ ನನಗೂ ಅದನ್ನೇ ಮಾಡು ಅಂದ ಆದ್ರ ನೀವು ಮನೀಗೆ ಬಂದು ನನ್ನ ಕರಕೊಂಡು ಹೋಗಿ ಮನ್ಯಾಗ ಇಟಕೊಂಡು ಊಟಹಾಕಿ ಸಾಲೀ ಕಲಿಸಿದ್ರಿ ನೀವು ಮುಂದ ವಿಜಾಪುರದಾಗ ಹಾಸ್ಟೆಲ್ಗೆ ಸೇರಿಸಿದ್ರಿ ಅವತ್ತು ಹಾಂಗ ಮಾಡದಿದ್ರ ನಾನು ಇನ್ನೂ ಕಸಾಗುಡಿಸುತ್ತಾನೇ ಇರತಿದ್ದೆ. ಖರೇ ಹೇಳತೀನಿ ಸರ್ ನನ್ನ ಮೈಮ್ಯಾಲಿನ ಚರ್ಮಾ ಸುಲದು ನಿಮ್ಮ ಕಾಲಿಗೆ ಚಪ್ಪಲೀ ಮಾಡಿದ್ರೂ ನನ್ನ ಋಣ ತೀರೋದಿಲ್ಲ ಸರ್" ಎಂದವನೇ ಬಿಕ್ಕುತ್ತಾ ಮತ್ತೊಮ್ಮೆ ಅಜ್ಜನ ಕಾಲಿಗೆ ಬಿದ್ದ. ಹೆಂಡತಿಯಿಂದಲೂ ನಮಸ್ಕಾರ ಮಾಡಿಸಿದ ಒಂದೆಡೆಗೆ ಕೃತಜ್ಞನಾದ ವಿದ್ಯಾರ್ಥಿ ಇನ್ನೊಂದೆಡೆಗೆ ಕೃತಾರ್ಥನಾದ ಗುರು. ವಿದ್ಯಾರ್ಥಿ ಇನ್ನೊಂದೆಡೆಗೆ ಗುರು ಇಬ್ಬರೂ ಅಳುತ್ತ ಒಬ್ಬರನೊಬ್ಬರು ಅಪ್ಪಿಕೊಂಡ ರೀತಿ ಸಾರ್ಥಕ ಶಿಕ್ಷಕತ್ವದ ಹೆಗ್ಗುರುತು ಇದು ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ನೊಬೆಲ್ ಪ್ರಶಸ್ತಿ. | |
| 26. | 'ಗುರಿ' ಪದ್ಯದ ಸಾರಾಂಶವನ್ನು ಕವಿಯ ಆಶಯದೊಂದಿಗೆ ಬರೆಯಿರಿ.<br>***ಅಥವಾ***<br>ಎಂ. ಗೋಪಾಲಕೃಷ್ಣ ಅಡಿಗ ಅವರು ನಮ್ಮ ಜೀವನಶೈಲಿಯ ಕುರಿತು ನೀಡಿದ ಸಂದೇಶವನ್ನು ವಿವರಿಸಿ ಬರೆಯಿರಿ.<br>***ಉತ್ತರ :***<br>ಮನುಷ್ಯನು ಆಸೆಗಳ ಸುಳಿಯಲ್ಲಿ ಸಿಲುಕಿ ನೆಲೆ ಇರದೇ ಪರದಾಡುತ್ತಿದ್ದಾನೆ. ಮನುಷ್ಯನ ಬಾಳಿಗೆ ಒಂದು ನಿರ್ದಿಷ್ಟತೆಬೇಕು. ಕೆಸರಲ್ಲಿ ಇದ್ದರೂ ಕಮಲ ಸೂರ್ಯನ ಕಿರಣಗಳಿಗೆ ಅರಳಿ ವಿಜೃಂಬಿಸುವಂತೆ ಮಾನವನು ಹುಟ್ಟಿದ ಸಾರ್ಥಕತೆಯನ್ನು ಪಡೆಯಬೇಕು. ಗಾಳಿ ಬಂದೆಡೆ ತಿರುಗುವ ಹೇಡಿತನ, ದಾಳಿ ಬಂದೊಡನೆ ಶರಣೆಂಬ ಹೆಣ್ತನವನ್ನು ಬಿಟ್ಟು, ಹಿಡಿದ ದಾರಿಯಲ್ಲಿ ಕೊನೆಯವರೆಗೆ ಪೌರುಷದ ಬೆಳಕಿನಲ್ಲಿ ಬಾಳಬೇಕು. ಒಂದು ಬಾಣಕೆ ಒಂದೇ ಗುರಿ, ಒಂದು ದೇಹಕ್ಕೆ ಒಂದೇ ಆತ್ಮ ಇರುವಂತೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಒಂದು ಜೀವಕ್ಕೆ ಒಂದೇ ಹೆಗ್ಗುರಿ ಇಟ್ಟುಕೊಂಡು ಅದಕ್ಕಾಗಿ ಹಗಲಿರುಳು ಹೋರಾಡಬೇಕು. ನರನೊಳಗೆ ನಾರಾಯಣನ ರೂಪವನ್ನು ಕಂಡು ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕೆ ಬಾಳುವುದೇ ಜೀವನ ಎಂದು ಕವಿಗಳು 'ಗುರಿ' ಪದ್ಯದ ಮೂಲಕ ಆಶಯಿಸುತ್ತಾರೆ. | |
| | **ಅಥವಾ** | |
| | ಬದುಕಿಗೊಂದು ಗುರಿ ಇಲ್ಲದಿದ್ದರೆ ಅದು ಎಲ್ಲಿಗೆ ಹೋಗಬೇಕೆಂಬ ನಿಶ್ಚಿತತೆ ಇಲ್ಲದ ಅಪಾರವಾದ ಕಡಲಲ್ಲಿ ಚುಕ್ಕಾಣಿ ಇಲ್ಲದೆ ನೌಕೆಯನ್ನು ನೆಡೆಸಿದಂತೆ ಬಾಲ್ಯದ ದಿನಗಳಲ್ಲಿ ನಿರ್ದಿಷ್ಟ ಗುರಿಯನ್ನು ನಿಶ್ಚಯಿಸಲು ಆಗುವುದಿಲ್ಲವಾದರೂ, ಮುಂದೆ ಬೆಳೆದಂತೆ ಅದು ಖಚಿತ ರೂಪತಾಳಬೇಕು. ಸ್ವೀಕರಿಸಿದ ಆ ಗುರಿಯನ್ನು ನಿರ್ವಹಿಸಲು ಕಷ್ಟವೆನಿಸಿದರೂ, ವೈಯಕ್ತಿಕ ಮತ್ತು ಪರಿವಾರದ ಹಾಗೂ ದೇಶದ ಶ್ರೇಯಸ್ಸಿಗಾಗಿ ಎದುರಾಗುವ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಮುಂದೆ ಸಾಗಬೇಕು. ಒಂದು ಬಾಣಕ್ಕೆ ಒಂದೇ ಗುರಿ, ದೇಹಕ್ಕೂ ಆತ್ಮ ಒಂದೇ ಹಾಗೆಯೇ ಜೀವನಕ್ಕೂ ಸಾಧ್ಯತೆಯ ಒಂದೇ ಗುರಿ ಇರಬೇಕು. ಮಾನವರಲ್ಲಿ ದೈವತ್ವವನ್ನು, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರರ ಹಿತಕ್ಕಾಗಿ ಕರ್ತವ್ಯ ಪರರಾಗಬೇಕು. ಸ್ವಾರ್ಥದ ಜೊತೆ ಜೊತೆಯಲ್ಲಿಯೇ ಪರಾರ್ಥದಲ್ಲೂ ಜೀವನ ಸಾರ್ಥಕ್ಯವನ್ನು ಕಾಣಬೇಕು. ಸಮಾಜದಿಂದ ನೂರಾರನ್ನು ಪಡೆದು ಬೆಳೆದ ನಾವು ಅದೇ ಸಮಾಜಕ್ಕೆ ಸ್ವಲ್ಪವಾದರೂ ಮರಳಿಸುವುದು . ನಮ್ಮ ಜೀವನಶೈಲಿಯಿಂದ ಸಾಧ್ಯವಾಗಬೇಕು ಎಂದು ಕವಿಗಳಾದ ಎಂ. ಗೋಪಾಲಕೃಷ್ಣ ಅಡಿಗರು ಸಂದೇಶ ನೀಡುತ್ತಾರೆ. | |
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕ 1 ಅಂಕ) :** | $12 \times 1 = 12$ |
| 27. | 'ಚಪ್ಪಾಳೆತಟ್ಟು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ<br>(ಎ) ತತ್ಪುರುಷ ಸಮಾಸ (ಬಿ) ಕರ್ಮಧಾರಯ ಸಮಾಸ<br>(ಸಿ) ಕ್ರಿಯಾ ಸಮಾಸ (ಡಿ) ದ್ವಿಗು ಸಮಾಸ<br>***ಉತ್ತರ :*** (ಸಿ) ಕ್ರಿಯಾ ಸಮಾಸ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | 'ದೃಷ್ಟಿ' — ಈ ಪದದ ತದ್ಭವ ರೂಪ<br>(ಎ) ಕಣ್ಣು (ಬಿ) ದಿಟ್ಟಿ<br>(ಸಿ) ದಟ್ಟೆ (ಡಿ) ದೃಶ್ಯ<br>***ಉತ್ತರ :*** (ಬಿ) ದಿಟ್ಟಿ | |
| 29. | ಸಪ್ತಮೀ ವಿಭಕ್ತಿ ಪ್ರತ್ಯಯ ಉಳ್ಳ ಪದ<br>(ಎ) ಬಂಗಲೆಯ (ಬಿ) ಗಾಬರಿಯಿಂದ<br>(ಸಿ) ಮನೆಯು (ಡಿ) ಕೋಣೆಯಲ್ಲಿ<br>***ಉತ್ತರ :*** (ಡಿ) ಕೋಣೆಯಲ್ಲಿ | |
| 30. | 'ಸಿಡುಕು–ಮಿಡುಕು' ಎಂಬುದು<br>(ಎ) ಜೋಡಿಪದ (ಬಿ) ದ್ವಿರುಕ್ತಿ<br>(ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು<br>***ಉತ್ತರ :*** (ಎ) ಜೋಡಿಪದ | |
| 31. | 'ಜ್ಞಾನ' — ಈ ಪದದ ವಿರುದ್ಧಾರ್ಥಕ ಪದ<br>(ಎ) ವಿಜ್ಞಾನ (ಬಿ) ಅಜ್ಞಾನ<br>(ಸಿ) ಸುಜ್ಞಾನ (ಡಿ) ಮನೋಜ್ಞಾನ<br>***ಉತ್ತರ :*** (ಬಿ) ಅಜ್ಞಾನ | |
| 32. | 'ಅತ್ತಾರೆ' — ಈ ಪದದ ಗ್ರಾಂಥಿಕ ರೂಪ<br>(ಎ) ಅಳುತ್ತದೆ (ಬಿ) ಅಳತಾವ<br>(ಸಿ) ಅತ್ತರೆ (ಡಿ) ಅಳುತ್ತಾರೆ<br>***ಉತ್ತರ :*** (ಸಿ) ಅತ್ತರೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 33. | 'ಸತಿ' — ಈ ಪದದ ಅರ್ಥ<br>(ಎ) ಹೆಣ್ಣು (ಬಿ) ಗಂಡು<br>(ಸಿ) ಗಂಡ (ಡಿ) ಹೆಂಡತಿ<br>***ಉತ್ತರ :*** (ಡಿ) ಹೆಂಡತಿ | |
| 34. | 'ದೀಪದೆದುರಿಗೆ ತಿಮಿರ ಸರಿಯುವಂತೆ' — ಈ ವಾಕ್ಯದಲ್ಲಿ ಬಳಕೆಯಾದ ಅಲಂಕಾರ<br>(ಎ) ಉಪಮಾಲಂಕಾರ (ಬಿ) ರೂಪಕಾಲಂಕಾರ<br>(ಸಿ) ಶಬ್ದಾಲಂಕಾರ (ಡಿ) ದೃಷ್ಟಾಂತಾಲಂಕಾರ<br>***ಉತ್ತರ :*** (ಎ) ಉಪಮಾಲಂಕಾರ | |
| 35. | ಅವನು, ಅವರು ಎಂಬ ಪದಗಳು ಇದಕ್ಕೆ ಉದಾಹರಣೆ<br>(ಎ) ಅಂಕಿತನಾಮ (ಬಿ) ಸರ್ವನಾಮ<br>(ಸಿ) ಕ್ರಿಯಾಪದ (ಡಿ) ಭಾವನಾಮ<br>***ಉತ್ತರ :*** (ಬಿ) ಸರ್ವನಾಮ | |
| 36. | 'ಜಿಂಕೆ' ಪದವು — ಈ ಗುಂಪಿಗೆ ಸೇರುತ್ತದೆ<br>(ಎ) ರೂಢನಾಮ (ಬಿ) ಅನ್ವರ್ಥಕನಾಮ<br>(ಸಿ) ಅಂಕಿತನಾಮ (ಡಿ) ಸರ್ವನಾಮ<br>***ಉತ್ತರ :*** (ಎ) ರೂಢನಾಮ | |
| 37. | ದ್ವಿರುಕ್ತಿ ಪದಕ್ಕೆ ಉದಾಹರಣೆ<br>(ಎ) ಢಣಢಣ (ಬಿ) ಗಿಡಗಂಟೆ<br>(ಸಿ) ಮತ್ತೆಮತ್ತೆ (ಡಿ) ಸುಖದುಃಖ<br>***ಉತ್ತರ :*** (ಸಿ) ಮತ್ತೆಮತ್ತೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | ಆರು ಸಾಲಿನ ಪದ್ಯಕ್ಕೆ ಹೀಗೆನ್ನುವರು<br>(ಎ) ತ್ರಿಪದಿ (ಬಿ) ದ್ವಿಪದಿ<br>(ಸಿ) ಚೌಪದಿ (ಡಿ) ಷಟ್ಪದಿ<br>***ಉತ್ತರ :*** (ಡಿ) ಷಟ್ಪದಿ | |
| | **ವಿಭಾಗ – 'ಸಿ'**<br>**ಅಪಠಿತ ಗದ್ಯ :** (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 4 × 1 = 4 |
| | ಕನ್ನಡ ರಂಗಭೂಮಿಗೆ ದಕ್ಷಿಣ ಕನ್ನಡ ಜಿಲ್ಲೆ ಕೊಟ್ಟಿರುವ ಕೊಡುಗೆಗಳಲ್ಲಿ ಬಿ.ವಿ. ಕಾರಂತರು ಪ್ರಮುಖರು. ಇವರು ಬಂಟ್ವಾಳ ತಾಲ್ಲೂಕಿನ ಬಾಬುಕೋಡಿ ಗ್ರಾಮದ ನಾರಾಣಪ್ಪಯ್ಯ ಹಾಗೂ ಲಕ್ಷ್ಮಮ್ಮ ದಂಪತಿಗಳ ಹಿರಿಯ ಮಗನಾಗಿ ೧೯೨೯ ರಲ್ಲಿ ಜನಿಸಿದರು. ಸಂಗೀತ, ನಾಟಕ, ಓದು – ಈ ಮೂರು ಕಾರಂತರ ಬಾಲ್ಯದ ಆಸಕ್ತಿಯ ವಿಷಯಗಳು. ಬಡತನದಿಂದಾಗಿ ಬಾಲ್ಯದಲ್ಲಿಯೇ ಗುಬ್ಬಿ ಕಂಪನಿಯನ್ನು ಸೇರಿದರು. ಅಲ್ಲಿ ನಟನೆಯ ಜೊತೆಗೆ ಹಾರ್ಮೋನಿಯಂ ನುಡಿಸುವುದನ್ನು ಕಲಿತರು.<br>ಕಾರಂತರು ೧೦೪ ನಾಟಕಗಳನ್ನು ನಿರ್ದೇಶಿಸಿದ್ದಾರೆ. ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಚೋಮನ ದುಡಿ ಮುಂತಾದ ರಾಷ್ಟ್ರ ಪ್ರಶಸ್ತಿ ವಿಜೇತ ಎಂಟು ಚಿತ್ರಗಳಿಗೆ ನಿರ್ದೇಶನ ನೀಡಿದ್ದಾರೆ. ಇತರ ನಿರ್ದೇಶಕರ ೨೫ ಚಿತ್ರಗಳಿಗೆ ಹಿನ್ನೆಲೆ ಸಂಗೀತ ನೀಡಿದ್ದಾರೆ. ರಾಷ್ಟ್ರಾದ್ಯಂತ ಹದಿನೈದು ನಾಟಕ ಕಮ್ಮಟಗಳ ನಿರ್ದೇಶಕರಾಗಿದ್ದ ಕಾರಂತರಿಗೆ ಪದ್ಮಶ್ರೀ ಮೊದಲಾದ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳು ಲಭಿಸಿವೆ. | |
| 39. | ಕಾರಂತರು ಎಲ್ಲಿ ಜನಿಸಿದರು ?<br>***ಉತ್ತರ :***<br>ಕಾರಂತರು ಬಂಟ್ವಾಳ ತಾಲ್ಲೂಕಿನ ಬಾಬುಕೋಡಿ ಗ್ರಾಮದಲ್ಲಿ ಜನಿಸಿದರು. | |
| 40. | ಕಾರಂತರ ಆಸಕ್ತಿ ವಿಷಯಗಳಾವುವು ?<br>***ಉತ್ತರ :***<br>ಸಂಗೀತ, ನಾಟಕ, ಓದು ಕಾರಂತರ ಆಸಕ್ತಿ ವಿಷಯಗಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 41. | ಕಾರಂತರು ಎಷ್ಟು ನಾಟಕಗಳನ್ನು ನಿರ್ದೇಶಿಸಿದ್ದಾರೆ ?<br>***ಉತ್ತರ :***<br>ಕಾರಂತರು ೧೦೪ ನಾಟಕಗಳನ್ನು ನಿರ್ದೇಶಿಸಿದ್ದಾರೆ. | |
| 42. | ಕಾರಂತರಿಗೆ ಸಿಕ್ಕ ಪ್ರಶಸ್ತಿಗಳು ಯಾವುವು ?<br>***ಉತ್ತರ :***<br>ಕಾರಂತರಿಗೆ ಪದ್ಮಶ್ರೀ ಮೊದಲಾದ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳು ಲಭಿಸಿವೆ. | |
| 43. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)**<br>∗ ಕೈಕೆಸರಾದರೆ ಬಾಯಿ ಮೊಸರು<br>∗ ಹಾಸಿಗೆ ಇದ್ದಷ್ಟು ಕಾಲು ಚಾಚು<br>∗ ಬೆಳೆಯುವ ಸಿರಿ ಮೊಳಕೆಯಲ್ಲಿ<br>***ಉತ್ತರ :*** | $1 \times 3 = 3$ |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಗಾದೆಯ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 44. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)**<br>ನಿಮ್ಮನ್ನು ಕೊಪ್ಪಳ ಜಿಲ್ಲೆಯ ಪ್ರಗತಿನಗರದ 'ಚಂದ್ರಶೇಖರ' ಎಂದು ಭಾವಿಸಿಕೊಂಡು, ಬೀದಿದೀಪ ಸರಿಪಡಿಸುವಂತೆ ವಿನಂತಿಸಿ ನಿಮ್ಮ ಊರಿನ 'ಗ್ರಾಮ ಪಂಚಾಯತಿ ಅಧ್ಯಕ್ಷರಿ'ಗೊಂದು ಪತ್ರ ಬರೆಯಿರಿ.<br>***ಅಥವಾ***<br>ನಿಮ್ಮನ್ನು ವಿಜಯಪುರದ ಗವಿಶ್ರೀ ನಗರದ 'ಕುಸುಮಾ' ಎಂದು ಭಾವಿಸಿಕೊಂಡು, ನಿಮ್ಮ ವಿದ್ಯಾಭ್ಯಾಸದ ಪ್ರಗತಿ ಕುರಿತು, ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ 'ಸಿದ್ಧೇಶ್ವರ' ಎಂಬ ಹೆಸರಿನ ತಂದೆಯವರಿಗೊಂದು ಪತ್ರ ಬರೆಯಿರಿ. | $1 \times 4 = 4$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಉತ್ತರ :* | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ಒಟ್ಟು | 4 ಅಂಕಗಳು |
| | **ಅಥವಾ** | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ಒಟ್ಟು | 4 ಅಂಕಗಳು |
| 45. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | * ದೂರದರ್ಶನದ ಮಹತ್ವ | |
| | * ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ | |
| | * ಭ್ರಷ್ಟಾಚಾರ | |
| | *ಉತ್ತರ :* | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |